# UNIVERSITY LIBRARY

## Newspaper's Agri Clippings

For more information visit
University Library Website
Web - uasbagrilibindia.org
E-mail- librarian@uasbangalore.edu.in

07-08-2026
Friday

---

# ವಿ ರೈತ ಮಿತ್ರ



■ ಬಿತ್ತನೆಬೀಜದ ಗುಣಮಟ್ಟ ಹಾಗೂ ಮೊಳಕೆ ಪ್ರಮಾಣವನ್ನು ಖಾತ್ರಿಪಡಿಸಿಕೊಳ್ಳುವುದು ಹೇಗೆ?

**। ಶಿವಶಂಕರಪ್ಪ** ಹಾವೇರಿ

ಬಿತ್ತನೆ ಮಾಡುವ ಮೊದಲು ಬೀಜದ ಗುಣಮಟ್ಟ ತಿಳಿಯಲು ಬೀಜದ ಮೊಳಕೆ ಪರೀಕ್ಷೆ ಮಾಡುವುದು ಸೂಕ್ತ. ರೈತರು ಮನೆಯಲ್ಲಿ ಅಥವಾ ಹೊಲದಲ್ಲಿ ಸರಳವಾಗಿ ಹತ್ತಿ ಬಟ್ಟೆ, ಮರಳು/ಮಣ್ಣಿನ ವಿಧಾನವನ್ನು ಅನುಸರಿಸಿ ಮೊಳಕೆ ಬರುವ ಪ್ರಮಾಣ ಕಂಡುಕೊಳ್ಳಬಹುದು. ಮೊದಲಿಗೆ ನೆನೆಸಿದ ಬಟ್ಟೆ ಅಥವಾ ಮರಳು/ಮಣ್ಣಿನ ಮೇಲೆ ಬಿತ್ತನೆಗೆ ಉಪಯೋಗಿಸುವ ಬೀಜಗಳನ್ನು ತಲಾ 100ರಂತೆ ಆರೋಗ್ಯಕರ ಬೀಜಗಳನ್ನು ಹರಡಿ ತೆಳುವಾಗಿ ಮರಳಿನಿಂದ ಮುಚ್ಚಿ ತೇವಾಂಶವನ್ನು ಕಾಪಾಡಬೇಕು. ಸುಮಾರು 7ರಿಂದ 10 ದಿನಗಳ ನಂತರ ಮೊಳಕೆಯೊಡೆದ ಬೀಜಗಳನ್ನು ಎಣಿಸಿ ಮೊಳಕೆ ಪ್ರಮಾಣ ದೃಢಪಡಿಸಿಕೊಳ್ಳಬೇಕು. ಮೊಳಕೆ ಪ್ರಮಾಣ ಶೇ.90-100 ಇದ್ದಲ್ಲಿ ಬೀಜದ ಗುಣಮಟ್ಟ ಅತ್ಯುತ್ತಮವಾಗಿರಲಿದೆ. ಶೇ.80-89 -ಉತ್ತಮ, ಶೇ.70-79-ಸಾಧಾರಣ ಮತ್ತು ಶೇ.70ಕ್ಕಿಂತ ಕಡಿಮೆ ಇದ್ದಲ್ಲಿ ಕಳಪೆ ಎಂದು ನಿರ್ಧರಿಸಬಹುದು. ಮೊಳಕೆ ಪ್ರಮಾಣ ಶೇ.70ಕ್ಕಿಂತ ಕಡಿಮೆ ಇದ್ದಲ್ಲಿ ಬೀಜ ಬದಲಾವಣೆ ಅಥವಾ ಹೆಚ್ಚಿನ ಬೀಜ ಬಳಕೆ ಸೂಕ್ತ. ಇದರಿಂದಾಗಿ ಉತ್ತಮ ಮೊಳಕೆ, ಸಮಾನ ಸಸಿ ಬೆಳವಣಿಗೆ ಮತ್ತು ಹೆಚ್ಚಿನ ಇಳುವರಿ ಪಡೆಯಬಹುದು.

**। ಡಾ. ಪ್ರಮಿಳಾ ಸಿ.ಕೆ.** ಸಹಾಯಕ ಪ್ರಾಧ್ಯಾಪಕರು, ಬೀಜ ವಿಜ್ಞಾನ

ರೈತರ ಸಮಸ್ಯೆಗಳಿಗೆ ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು. ಇಲ್ಲಿನ ತಜ್ಞರು ಉತ್ತರಿಸಲಿದ್ದಾರೆ. ನಿಮ್ಮ ಪ್ರಶ್ನೆಗಳನ್ನು 18004250571 / 080-23627889 ಸಂಖ್ಯೆಗೆ ಕರೆ ಮಾಡಿ ತಿಳಿಸಿ ಅಥವಾ 94824 77812 ಸಂಖ್ಯೆಗೆ ವಾಟ್ಸ್‌ಆ್ಯಪ್ ಮಾಡಿ

Vijayavani Pg.02c

---

# ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

NAAC A+ Accredited

ಆಸ್ತಿ ಅಧಿಕಾರಿಗಳ ಕಛೇರಿ, ನಾಯಕ್ ಭವನ, ಜಿಕೆವಿಕೆ, ಬೆಂಗಳೂರು-560 065.

GKVK : 2330153-250 / Direct : 23332765.

Website: www.uasbangalore.edu.in. Email : eo@uasbangalore.edu.in

ಸಂ:ಇ.ಓ/ಎಸ್.ಪಿ.ಓ/ಕೆಪಿಪಿಪಿ/7/2026-27 ದಿನಾಂಕ: 04-08-2026

## ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ಜಿಕೆವಿಕೆ, ಬೆಂಗಳೂರು, ಅವಶ್ಯವಿರುವ ಉಪಕರಣಗಳನ್ನು ಸರಬರಾಜು ಮಾಡಲು ಕೆ.ಜಿ-1, ಮತ್ತು ಕೆ.ಜಿ-2. ಟೆಂಡರ್ ನಿಬಂದನೆಗೊಳಪಟ್ಟಂತೆ ಟೆಂಡರನ್ನು ಆಹ್ವಾನಿಸಲಾಗಿದೆ.

**ವಿವರ: 1)** ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 18-08-2026 ಸಂಜೆ 4.00 ಘಂಟೆಯವರೆಗೆ 2)** ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 20-08-2026 ಸಮಯ ಬೆಳಗ್ಗೆ 10.30 ಕ್ಕೆ, 3)** ಆರ್ಥಿಕ ಬಿಡ್ ತೆರೆಯುವ **ದಿನಾಂಕ: 24-08-2026 ಸಮಯ ಬೆಳಗ್ಗೆ 10.30 ಕ್ಕೆ,** ಆಸ್ತಿ ಅಧಿಕಾರಿಗಳ ಕಛೇರಿಯ ಟೆಂಡರ್ ಕಮಿಟಿ ಕೊಠಡಿಯಲ್ಲಿ ನಡೆಯುತ್ತದೆ. **ಸೂಚನೆ:** ಯಾವುದೇ ಟೆಂಡರನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸಿಕೊಂಡಿದೆ. ಹೆಚ್ಚಿನ ಮಾಹಿತಿಗಾಗಿ ಟೆಂಡರ್ ಪ್ರಕಟಣೆಯ ವಿವರಗಳು ವೆಬ್‌ಸೈಟ್: **kppp.karnataka.gov.in** ರಲ್ಲಿ ದೊರೆಯುತ್ತದೆ ಹಾಗೂ ಈ ಕಛೇರಿಯನ್ನು, ಕಛೇರಿಯ ವೇಳೆಯಲ್ಲಿ **ಸಹಾಯವಾಣಿ ದೂರವಾಣಿ ಸಂಖ್ಯೆ. 09240214000 / 09240214001, support@eproc helpdesk.com** ಅಥವಾ **www.uasbangalore.edu.in ದೂರವಾಣಿ ಸಂಖ್ಯೆ: 23630128** ಅನ್ನು ಸಂಪರ್ಕಿಸಬಹುದು.

ಸಹಿ/-
ಆಸ್ತಿ ಅಧಿಕಾರಿಗಳು

DIPR/CP/RO2035/AAPL/2026-27

Kannadaprabha Pg.13

---

# ಕನ್ನಡ ಕೃಷಿ ಪುಸ್ತಕ ಪ್ರಶಸ್ತಿಗೆ ಅರ್ಜಿ ಆಹ್ವಾನ

• **ಬೆಂಗಳೂರು:** ಜೆಬ್ಯಾರದ ಕೃಷಿ ವಿಶ್ವವಿದ್ಯಾನಿಲಯದಿಂದ ಕನ್ನಡ ಕೃಷಿ ಪುಸ್ತಕ ಪ್ರಶಸ್ತಿ-2025ಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಕನ್ನಡದಲ್ಲಿ ಕೃಷಿ ಬರವಣಿಗೆಯನ್ನು ಪ್ರೋತ್ಸಾಹಿಸಲು ಕನ್ನಡ ಕೃಷಿ ಪುಸ್ತಕ ಪ್ರಶಸ್ತಿ ನೀಡುತ್ತಿದ್ದು 2025ರಲ್ಲಿ ಪ್ರಥಮ ಮುದ್ರಣವಾಗಿ ಪ್ರಕಟವಾಗಿರುವ ಕೃಷಿ ಸಂಬಂಧಿತ ಕನ್ನಡ ಪುಸ್ತಕಗಳನ್ನು ಲೇಖಕರಿಂದ ಆಹ್ವಾನಿಸಿದೆ. ಪ್ರಶಸ್ತಿಯು ರೂ.10 ಸಾವಿರ ನಗದು ಮತ್ತು ಪ್ರಶಸ್ತಿ ಫಲಕವನ್ನು ಒಳಗೊಂಡಿರುತ್ತದೆ. ಲೇಖಕರು ನಿಗದಿತ ನಮೂನೆಯಲ್ಲಿ ಪ್ರಶಸ್ತಿಗೆ ಸಲ್ಲಿಸುವ ಮೂರು ಪ್ರತಿಗಳನ್ನು ತಮ್ಮ ಸ್ವವಿಳಾಸದೊಂದಿಗೆ ಅ.20ರೊಳಗೆ ಮುಖ್ಯಸ್ಥರು, ಕನ್ನಡ ಅಧ್ಯಯನ ವಿಭಾಗ, ಕೃಷಿ ವಿಶ್ವವಿದ್ಯಾನಿಲಯ, ಗಾ.ಕೃ.ವಿ.ಕೇ., ಬೆಂಗಳೂರು-560065 ಇವರಿಗೆ ಕಳುಹಿಸುವುದು. ಹೆಚ್ಚಿನ ವಿವರಗಳಿಗೆ http://uasbangalore.edu.in ಅಂತರ್ಜಾಲಕ್ಕೆ ಭೇಟಿ ನೀಡುವುದು ಅಥವಾ ದೂರವಾಣಿ ಸಂಖ್ಯೆ: 080-23330153 ವಿಸ್ತರಣೆ 373 ಸಂಪರ್ಕಿಸುವುದು ಎಂದು ಪ್ರಕಟಣೆ ತಿಳಿಸಿದೆ.

Hosadiganta Pg.07

---

# ಕೃಷಿ ಅಧಿಕಾರಿ ನೇಮಕಾತಿ ಅಧಿಸೂಚನೆ ವಾಪಸ್

ಬೆಂಗಳೂರು: ಸಿಎಂ ಶಿವಕುಮಾರ್ ಭರವಸೆ ಹಿನ್ನೆಲೆಯಲ್ಲಿ ಕೃಷಿ ಅಧಿಕಾರಿ ಮತ್ತ ಸಹಾಯಕ ಕೃಷಿ ಅಧಿಕಾರಿ ಹುದ್ದೆಗಳ ನೇರ ನೇಮಕಾತಿಗೆ ಬಿಇ ಮತ್ತು ಬಿಟೆಕ್ ಬಯೋಕೆಮಿಸ್ಟ್ರಿ ಪದವೀಧರರು ಕೂಡ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸುವ ವಿವಾದಿತ ನೇಮಕಾತಿ ಅಧಿಸೂಚನೆಯನ್ನು ಕೃಷಿ ಇಲಾಖೆ ಹಿಂಪಡೆದಿದೆ. 128 ಕೃಷಿ ಅಧಿಕಾರಿ ಹಾಗೂ 817 ಸಹಾಯಕ ಕೃಷಿ ಅಧಿಕಾರಿ ಸೇರಿ ಒಟ್ಟು 945 ಹುದ್ದೆಗಳ ನೇಮಕಾತಿಗೆ ಅಧಿಸೂಚನೆ ಹೊರಡಿಸಲಾಗಿತ್ತು. ಬಿಇ ಮತ್ತು ಬಿಟೆಕ್ ಅಭ್ಯರ್ಥಿಗಳಿಗೆ ಅವಕಾಶ ನೀಡುವುದರಿಂದ ಕೃಷಿ ವಿಜ್ಞಾನದಲ್ಲಿ ಪದವಿ ಪಡೆದಿರುವ ಅಭ್ಯರ್ಥಿಗಳಿಗೆ ಅನ್ಯಾಯವಾಗುತ್ತದೆಂದು ವಿದ್ಯಾರ್ಥಿಗಳು ದೂರಿದ್ದರು.

Kannadaprabha Pg.06

---

# ಕೃಷಿಯಲ್ಲಿ ಅತ್ಯಾಧುನಿಕ ಡಿಜಿಟಲ್ ತಂತ್ರಜ್ಞಾನ

• **ಬೆಂಗಳೂರು:** ರಾಜ್ಯ ಸರ್ಕಾರವು ಕೃಷಿ ಕ್ಷೇತ್ರದಲ್ಲಿ ಅತ್ಯಾಧುನಿಕ ಡಿಜಿಟಲ್ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವ ಮೂಲಕ ಹೊಸ ಮೈಲಿಗಲ್ಲನ್ನು ಸ್ಥಾಪಿಸಲು ಹೆಜ್ಜೆ ಇಟ್ಟಿದೆ. ಈ ಸಂಬಂಧ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು, ಕಬಿನಾಯ, ಕೃಷಿ, ತೋಟಗಾರಿಕೆ, ರೇಷ್ಮೆ, ಮೀನುಗಾರಿಕೆ ಹಾಗೂ ಏಟಿ-ಬಿಟಿ ಇಲಾಖೆಗಳ ಸಹಯೋಗದೊಂದಿಗೆ ಸಂಯೋಜಿತ ಡಿಜಿಟಲ್ ಬೆಳೆ ಸಮೀಕ್ಷೆ ಕುರಿತು ಪಾಲುದಾರರ ಕಾರ್ಯಾಗಾರ ಗುರುವಾರ ಆಯೋಜಿಸಿತ್ತು.

ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ, ಇ-ಆಡಳಿತ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯ ದರ್ಶಿ ಪಂಕಜ್ ಕುಮಾರ್ ಪಾಂಡೆ, ಬೆಳೆ ಸಮೀಕ್ಷೆ ಪ್ರಕ್ರಿಯೆಯನ್ನು ಮತ್ತಷ್ಟು ಬಲಪಡಿಸಲು, ಕೃಷಿ ದತ್ತಾಂಶದ ನಿಖರತೆ ಹೆಚ್ಚಿಸಲು ಹಾಗೂ ಸಾಕ್ಷ್ಯಾಧಾರಿತ ಆಡಳಿತ ಮತ್ತು ಪರಿಣಾಮಕಾರಿ ನೀತಿ ನಿರೂಪಣೆಗೆ ನೆರವಾಗಲು ಡಿಜಿಟಲ್ ತಂತ್ರಜ್ಞಾನಗಳ ಬಳಕೆ ಅತ್ಯಗತ್ಯ ಎಂದರು.

## ಐದು ಹೋಬಳಿಗಳಲ್ಲಿ ಪೈಲಟ್ ಅನುಷ್ಠಾನ

ರಾಜ್ಯ ಸರ್ಕಾರವು 2018 ರಿಂದ ಜಿಐಎಸ್ ಆಧಾರಿತ ಮೊಬೈಲ್ ಆ್ಯಪ್ ಮೂಲಕ ಡಿಜಿಟಲ್ ಬೆಳೆ ಸಮೀಕ್ಷೆ ಅನುಷ್ಠಾನಗೊಳಿಸುತ್ತಿದ್ದು, ಪ್ಲಾಟ್ ಮಟ್ಟದಲ್ಲಿ ದೃಢೀಕೃತ ಬೆಳೆ ಮಾಹಿತಿಯನ್ನು ಸಂಗ್ರಹಿಸುತ್ತಿದೆ. ಮೊದಲ ಹಂತದಲ್ಲಿ ರಾಜ್ಯದ ಎಲ್ಲಾ ಭೌಗೋಳಿಕ ವಿಭಾಗಗಳನ್ನು ಪ್ರತಿನಿಧಿಸುವಂತೆ ಆಯ್ದ ಐದು ಹೋಬಳಿಗಳಲ್ಲಿ ಪ್ರಾಯೋಗಿಕವಾಗಿ ಈ ನೂತನ ಸಂಯೋಜಿತ ಡಿಜಿಟಲ್ ಬೆಳೆ ಸಮೀಕ್ಷೆಯನ್ನು ಅನುಷ್ಠಾನಗೊಳಿಸಲು ನಿರ್ಧರಿಸಲಾಗಿದೆ.

ಪ್ರಸ್ತುತ ಈ ಸಮೀಕ್ಷೆಯ ದತ್ತಾಂಶದ ನಿಖರತೆ, ವಿಶ್ವಾಸಾರ್ಹತೆ ಹಾಗೂ ವೈಜ್ಞಾನಿಕ ಪರಿಶೀಲನೆಯನ್ನು ಮತ್ತಷ್ಟು ಉತ್ತಮಪಡಿಸುವ ಉದ್ದೇಶದಿಂದ ಉಪಗ್ರಹ ರೆಸಲ್ಯೂಶನ್ ಉಪಗ್ರಹ ಚಿತ್ರಣ, ಡ್ರೋನ್ ಸಮೀಕ್ಷೆ, ಜಿಐಎಸ್ ದತ್ತಾಂಶ, ಕೃತಕ ಬುದ್ಧಿಮತ್ತೆ ಹಾಗೂ ಮೆಷಿನ್ ಲರ್ನಿಂಗ್ ಸೇರಿದಂತೆ ಅತ್ಯಾಧುನಿಕ ತಂತ್ರಜ್ಞಾನಗಳನ್ನು ಪ್ರಸ್ತುತ ಲಭ್ಯವಿರುವ ಬೆಳೆ ಸಮೀಕ್ಷೆಯ ದತ್ತಾಂಶದೊಂದಿಗೆ ಸಂಯೋಜಿಸಿ, ಸಂಯೋಜಿತ ಡಿಜಿಟಲ್ ಬೆಳೆ ಸಮೀಕ್ಷೆ ಮಾದರಿಯನ್ನು ಅಭಿವೃದ್ಧಿ ಪಡಿಸಲಾಗಿದೆ. ಕೃಷಿ ಇಲಾಖೆ ಸರ್ಕಾರದ ಕಾರ್ಯದರ್ಶಿ ಡಾ. ರಾಜೇಂದ್ರ ಕೆ. ಸೇರಿದಂತೆ ವಿವಿಧ ಇಲಾಖೆಯ ಉನ್ನತ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

Hosadiganta Pg.10

# ಕೃಷಿ ಅಧಿಕಾರಿ ನೇಮಕಾತಿಯ ಪರೀಕ್ಷೆ ತಾತ್ಕಾಲಿಕ ಮುಂದೂಡಿಕೆ

**ಬೆಂಗಳೂರು;** ಕೃಷಿ ಅಧಿಕಾರಿ (ಎಒ) ಹಾಗೂ ಸಹಾಯಕ ಕೃಷಿ ಅಧಿಕಾರಿ (ಎಎಒ) ನೇಮಕಾತಿ ಪ್ರಕ್ರಿಯೆಗೆ ತಡೆ ನೀಡಬೇಕೆಂದು ಆಗ್ರಹಿಸಿ ವಿದ್ಯಾರ್ಥಿಗಳು ನಡೆಸಿದ ಪ್ರತಿಭಟನೆಗೆ ಮಣಿದ ಸರ್ಕಾರ, ನೇಮಕಾತಿ ಪರೀಕ್ಷೆಯನ್ನು ತಾತ್ಕಾಲಿಕವಾಗಿ ಮುಂದೂಡಿದೆ.

ಫ್ರೀಡಂಪಾರ್ಕ್‌ನಲ್ಲಿ ಅಖಿಲ ಕರ್ನಾಟಕ ಕೃಷಿ ಮತ್ತು ಕೃಷಿ ಸಂಬಂಧಿತ ಪದವೀಧರರ ಒಕ್ಕೂಟದ ನೇತೃತ್ವದಲ್ಲಿ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು. ನೇಮಕಾತಿ ಆದೇಶವನ್ನು ಹಿಂದಕ್ಕೆ ಪಡೆದು ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿರುವ ಲೋಪದೋಷಗಳನ್ನು ಸರಿಪಡಿಸಿ ಶೀಘ್ರವೇ ಮರು ಅಧಿಸೂಚನೆ ಹೊರಡಿಸಬೇಕೆಂದು ವಿದ್ಯಾರ್ಥಿಗಳು ಆಗ್ರಹಿಸಿದರು. ಪ್ರತಿಭಟನಾ ಸ್ಥಳಕ್ಕೆ ಗೃಹಸಚಿವ ಪ್ರಿಯಾಂಕ್ ಖರ್ಗೆ ಭೇಟಿ ನೀಡಿ ಪ್ರತಿಭಟನಾಕಾರರ ಮನವಿ ಆಲಿಸಿ, ಪರೀಕ್ಷೆ ಮುಂದೂಡುವ ತೀರ್ಮಾನ ಪ್ರಕಟಿಸಿದರು. ಬಳಿಕ ವಿದ್ಯಾರ್ಥಿಗಳು ಪ್ರತಿಭಟನೆ ಕೈಬಿಟ್ಟರು. ಕೃಷಿ ವಿಜ್ಞಾನಿ ಪ್ರಕಾಶ್ ಕಮ್ಮರಡಿ ಮಾತನಾಡಿ, ಕೃಷಿ ಅಧಿಕಾರಿ ಹಾಗೂ ಸಹಾಯಕ ಕೃಷಿ ಅಧಿಕಾರಿಗಳ 945 ಹುದ್ದೆಯ ನೇಮಕಾತಿ ಸಂಬಂಧ ಹೊರಡಿಸಿರುವ ಅಧಿಸೂಚನೆಯಲ್ಲಿ ಅರ್ಹ ಮಾನದಂಡವಿಲ್ಲದೆ ನೇಮಕಾತಿಯಲ್ಲಿ ಬಿ.ಇ ಹಾಗೂ ಬಿ.ಟೆಕ್ ಪದವೀಧರರಿಗೂ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಅರ್ಹ ಕೃಷಿ ಪದವೀಧರಿಗೆ ಅನ್ಯಾಯವಾಗಲಿದೆ. ಹಾಗಾಗಿ ನೇಮಕಾತಿ ಅರ್ಹತಾ ನಿಯಮಗಳನ್ನು ತಿದ್ದುಪಡಿ ಮಾಡಿ ಪರಿಷ್ಕೃತ ಅಧಿಸೂಚನೆ ಹೊರಡಿಸಬೇಕೆಂದರು.

## ಬೇಡಿಕೆ ಏನು?

ಐಸಿಎಆರ್ ಮಾನದಂಡಗಳನ್ನು ಹೊರೈಸದ ಖಾಸಗಿ ಕೃಷಿ ಕಾಲೇಜುಗಳಿಗೆ ನೀಡಲಾಗುವ ಹೊಸ ಅಥವಾ ಮುಂದುವರಿದ ಸಂಯೋಜನೆಯನ್ನು ತಕ್ಷಣವೇ ಸ್ಥಗಿತಗೊಳಿಸಬೇಕೆಂದು ಪ್ರತಿಭಟನಾಕಾರರು ಒತ್ತಾಯಿಸಿದರು.

Samyuktha Karnataka Pg.03

# 'ಕೈತೋಟ' ತರಬೇತಿ ಶಿಬಿರ 12ರಂದು

ಬೆಂಗಳೂರು: ಹೆಬ್ಬಾಳ ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ಆರೋಗ್ಯಕರ ಜೀವನಶೈಲಿ ಹಾಗೂ ಗುಣಮಟ್ಟದ ಆಹಾರದ ಮಹತ್ವ ತಿಳಿಸಲು ಆ.12ರಂದು 'ಆರೋಗ್ಯಕ್ಕಾಗಿ ಮನೆಯಂಗಳದ ಕೈತೋಟ' ಒಂದು ದಿನದ ತರಬೇತಿ ಶಿಬಿರ ಆಯೋಜಿಸಲಾಗಿದೆ.

ಸೊಪ್ಪು, ತರಕಾರಿ, ಔಷಧ, ಸುಗಂಧದ್ರವ್ಯ ಸಸ್ಯಗಳ ಬೆಳವಣಿಗೆ, ಸಾವಯವ ಗೊಬ್ಬರದ ತಯಾರಿಕೆ, ಕೀಟ, ರೋಗಗಳ ಸಮಗ್ರ ನಿರ್ವಹಣೆ, ನೀರಿನ ಸಮರ್ಪಕ ಬಳಕೆ ಕುರಿತು ತರಬೇತಿ ನೀಡಲಾಗುತ್ತದೆ. ಆಸಕ್ತ 30 ಮಂದಿಗೆ ತರಬೇತಿ ನೀಡಲಾಗುತ್ತಿದ್ದು, ನೋಂದಣಿ ಶುಲ್ಕ ₹1,180 ಇದೆ. ಆ.2ರೊಳಗೆ ತೋಟಗಾರಿಕೆ ವಿಭಾಗ, ಕೃಷಿ ವಿ.ವಿ, ಬೆಂಗಳೂರು-ಇಲ್ಲಿ ನೋಂದಾಯಿಸಬೇಕು. ಮೊ.70225 01752, 99803 26928.

Prajavani Pg.02

# ಆ.8, 9ಕ್ಕಿದ್ದ ಕೃಷಿ ಅಧಿಕಾರಿಗಳ ನೇಮಕಾತಿ ಪರೀಕ್ಷೆ ಮುಂದೂಡಿಕೆ

## ಅರ್ಹತೆ ಪರಿಶೀಲಿಸುವ ವಿದ್ಯಾರ್ಥಿಗಳ ಆಗ್ರಹಕ್ಕೆ ಸ್ಪಂದನೆ

■ ಉದಯವಾಣಿ ಸಮಾಚಾರ

ಬೆಂಗಳೂರು: ಕೃಷಿ ಮತ್ತು ಸಹಾಯಕ ಕೃಷಿ ಅಧಿಕಾರಿ (ಎಒ-ಎಎಒ) ಹುದ್ದೆಗಳ ನೇಮಕಾತಿ ಅರ್ಹತಾ ಮಾನದಂಡ ವಿರೋಧಿಸಿ ಕೃಷಿ ವಿದ್ಯಾರ್ಥಿಗಳು ನಡೆಸಿದ ಪ್ರತಿಭಟನೆಗೆ ಸ್ಪಂದಿಸಿರುವ ಸರ್ಕಾರ, ಆ. 8 ಮತ್ತು 9ರಂದು ನಿಗದಿಯಾದ ಪರೀಕ್ಷೆ ತಾತ್ಕಾಲಿಕವಾಗಿ ಮುಂದೂಡಿದೆ. ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ಸ್ಥಳಕ್ಕೆ ಭೇಟಿ ನೀಡಿ ಮಾತನಾಡಿದ ಸಚಿವ ಪ್ರಿಯಾಂಕ್ , ನಿಯಮ ಪರಿಶೀಲ ನೆಗೆ ಸಮಿತಿ ರಚಿಸಲಾಗುವುದು ಎಂದಿದ್ದಾರೆ.



### ಅನ್ಯಾಯ ಆಗದಂತೆ ಪರೀಕ್ಷೆ: ಸಿಎಂ ಡಿಕೆಶಿ

ಕೃಷಿ ಅಧಿಕಾರಿ ನೇಮಕಾತಿ ಪರೀಕ್ಷೆಯನ್ನು ತಾತ್ಕಾಲಿಕವಾಗಿ ಮುಂದೂಡಲಾಗಿದೆ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ 'ಎಕ್ಸ್' ಮೂಲಕ ತಿಳಿಸಿದ್ದಾರೆ. ಜಿಕೆವಿಕೆ ವಿದ್ಯಾರ್ಥಿಗಳ ಭೇಟಿಯ ಬಳಿಕ ಸ್ಪಂದಿಸಿರುವ ಅವರು, ನಮ್ಮ ಕೃಷಿ ಪದವೀಧರರಿಗೆ ಕಿಂಚಿತ್ತೂ ಅನ್ಯಾಯವಾಗದಂತೆ ಪರೀಕ್ಷೆ ನಡೆಸಲು ಸರ್ಕಾರ ದೃಢಸಂಕಲ್ಪ ಮಾಡಿದೆ ಎಂದು ಸ್ಪಷ್ಟಪಡಿಸಿದ್ದಾರೆ.

Udayavani Pg.06

# ಕೃಷಿ ಅಧಿಕಾರಿ ನೇಮಕ: ಪರೀಕ್ಷೆ ಮುಂದಕ್ಕೆ

## ಅಖಿಲ ಕರ್ನಾಟಕ ಕೃಷಿ ಪದವೀಧರರ ಒಕ್ಕೂಟದಿಂದ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃಷಿ ಅಧಿಕಾರಿ (ಎಒ) ಹಾಗೂ ಸಹಾಯಕ ಕೃಷಿ ಅಧಿಕಾರಿ (ಎಎಒ) ನೇಮಕಾತಿ ಪ್ರಕ್ರಿಯೆಗೆ ತಡೆ ನೀಡಬೇಕು ಎಂದು ಆಗ್ರಹಿಸಿ ವಿದ್ಯಾರ್ಥಿಗಳು ನಡೆಸಿದ ಪ್ರತಿಭಟನೆಗೆ ಮಣಿದ ಸರ್ಕಾರ, ನೇಮಕಾತಿ ಪರೀಕ್ಷೆಯನ್ನು ತಾತ್ಕಾಲಿಕವಾಗಿ ಮುಂದೂಡಿದೆ.

ಇಲ್ಲಿನ ಸ್ವಾತಂತ್ರ್ಯ ಉದ್ಯಾನದಲ್ಲಿ, ಅಖಿಲ ಕರ್ನಾಟಕ ಕೃಷಿ ಮತ್ತು ಕೃಷಿ ಸಂಬಂಧಿತ ಪದವೀಧರರ ಒಕ್ಕೂಟದ ನೇತೃತ್ವದಲ್ಲಿ ವಿದ್ಯಾರ್ಥಿಗಳು ಗುರುವಾರ ಪ್ರತಿಭಟನೆ ನಡೆಸಿದರು. ನೇಮಕಾತಿ ಆದೇಶವನ್ನು ಹಿಂದಕ್ಕೆ ಪಡೆದು ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿರುವ ಲೋಪದೋಷಗಳನ್ನು ಸರಿಪಡಿಸಿ ಶೀಘ್ರವೇ ಮರು ಅಧಿಸೂಚನೆ ಹೊರಡಿಸಬೇಕು ಎಂದು ವಿದ್ಯಾರ್ಥಿಗಳು ಆಗ್ರಹಿಸಿದರು.

ಪ್ರತಿಭಟನಾ ಸ್ಥಳಕ್ಕೆ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರು ಭೇಟಿ ನೀಡಿ ಪ್ರತಿಭಟನಕಾರರ ಮನವಿ ಆಲಿಸಿ, ಪರೀಕ್ಷೆ ಮುಂದೂಡುವ ತೀರ್ಮಾನ ಪ್ರಕಟಿಸಿದರು. ಬಳಿಕ ವಿದ್ಯಾರ್ಥಿಗಳು ಪ್ರತಿಭಟನೆ ಕೈಬಿಟ್ಟರು.

**ಬೇಡಿಕೆ ಏನು?:** ಐಸಿಎಆರ್ ಮಾನದಂಡಗಳನ್ನು ಪೂರೈಸದ ಖಾಸಗಿ ಕೃಷಿ ಕಾಲೇಜುಗಳಿಗೆ ನೀಡಲಾಗುವ ಹೊಸ ಅಥವಾ ಮುಂದುವರಿದ ಸಂಯೋಜನೆಯನ್ನು ತಕ್ಷಣವೇ ಸ್ಥಗಿತಗೊಳಿಸಬೇಕು ಎಂದು ಪ್ರತಿಭಟನಕಾರರು ಒತ್ತಾಯಿಸಿದರು.

ಈ ವೇಳೆ ಮಾತನಾಡಿದ ಕೃಷಿ ವಿಜ್ಞಾನಿ ಪ್ರಕಾಶ್ ಕಮ್ಮರಡಿ, ಕೃಷಿ ಅಧಿಕಾರಿ ಹಾಗೂ ಸಹಾಯಕ ಕೃಷಿ ಅಧಿಕಾರಿಗಳ 945 ಹುದ್ದೆಯ ನೇಮಕಾತಿ ಸಂಬಂಧ ಹೊರಡಿಸಿರುವ ಅಧಿಸೂಚನೆಯಲ್ಲಿ ಅರ್ಹ ಮಾನದಂಡವಿಲ್ಲದೇ ನೇಮಕಾತಿಯಲ್ಲಿ ಬಿ.ಇ ಹಾಗೂ ಹಾಗೂ ಬಿ.ಟೆಕ್ ಪದವೀಧರರಿಗೂ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಇದರಿಂದ ಅರ್ಹ ಕೃಷಿ ಪದವೀಧರ ವಿದ್ಯಾರ್ಥಿಗಳಿಗೆ ತೀವ್ರ ಅನ್ಯಾಯವಾಗಲಿದೆ. ಹಾಗಾಗಿ, ನೇಮಕಾತಿ ಅರ್ಹತಾ ನಿಯಮಗಳನ್ನು ತಿದ್ದುಪಡಿ ಮಾಡಿ ಪರಿಷ್ಕೃತ ಅಧಿಸೂಚನೆ ಹೊರಡಿಸಬೇಕು ಎಂದರು.

ಗೋಪಾಲ್, ನಿವೃತ್ತ ಪ್ರಾಧ್ಯಾಪಕ ನಾರಾಯಣಸ್ವಾಮಿ, ಸಂಶೋಧನಾ ವಿದ್ಯಾರ್ಥಿ ನಂದೀಶ್ ಸೇರಿದಂತೆ ನೂರಾರು ವಿದ್ಯಾರ್ಥಿಗಳು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.



ಎಒ, ಎಎಒ ನೇಮಕಾತಿ ಪ್ರಕ್ರಿಯೆಯನ್ನು ಹಿಂದಕ್ಕೆ ಪಡೆದು ಮರು ಅಧಿಸೂಚನೆಗೆ ಆದೇಶಿಸಬೇಕು ಎಂದು ಅಖಿಲ ಕರ್ನಾಟಕ ಕೃಷಿ ಮತ್ತು ಕೃಷಿ ಸಂಬಂಧಿತ ಪದವೀಧರರ ಒಕ್ಕೂಟದ ನೇತೃತ್ವದಲ್ಲಿ ವಿದ್ಯಾರ್ಥಿಗಳು ಗುರುವಾರ ಪ್ರತಿಭಟಿಸಿದರು -ಪ್ರಜಾವಾಣಿ ಚಿತ್ರ

### 'ಅರ್ಹರಿಗೆ ಅನ್ಯಾಯವಾಗದಂತೆ ಪರೀಕ್ಷೆ'

'ಕೃಷಿ ಪದವೀಧರರಿಗೆ ಕಿಂಚಿತ್ತೂ ಅನ್ಯಾಯವಾಗದಂತೆ ಪರೀಕ್ಷೆ ನಡೆಸಲು ದೃಢಸಂಕಲ್ಪ ಮಾಡಿದ್ದೇವೆ' ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರು ಹೇಳಿದರು.

ಮನವಿ ಸ್ವೀಕರಿಸಿ ಮಾತನಾಡಿದ ಅವರು, 'ವಿದ್ಯಾರ್ಥಿಗಳ ಅಳಲಿಗೆ ಸದಾ ಕಿವಿಗೊಡುವ ಸರ್ಕಾರ ನಮ್ಮದು. ಕೃಷಿ ಅಧಿಕಾರಿ ನೇಮಕಾತಿಯ ಪರೀಕ್ಷೆಯನ್ನು ತಾತ್ಕಾಲಿಕವಾಗಿ ಮುಂದೂಡಲು ತೀರ್ಮಾನಿಸಲಾಗಿದೆ' ಎಂದರು.

Prajavani Pg.07

# ಹರದಗಟ್ಟಿ ಅರಣ್ಯದಲ್ಲಿ ಅಪರೂಪದ ಹಾರ್ನ್‌ಬಿಲ್

■ ಬೀರಪ್ಪ.ಎಸ್.ಪೂಜಾರ ಲಕ್ಷ್ಮೇಶ್ವರ(ಗದಗ)
beerappapujar93@gmail.com

ತಾಲೂಕಿನ ಹರದಗಟ್ಟಿ ಸಂರಕ್ಷಿತ ಅರಣ್ಯ ಪ್ರದೇಶದಲ್ಲಿ ಅಪರೂಪದ ಹಾರ್ನ್‌ಬಿಲ್ ಪಕ್ಷಿ ಕಾಣಿಸಿಕೊಂಡಿದೆ. ಮಲೆನಾಡು ಹಾಗೂ ಕೆಲ ಉತ್ತರ ಮತ್ತು ಈಶಾನ್ಯ ರಾಜ್ಯಗಳ ಅರಣ್ಯ ಪ್ರದೇಶಗಳಲ್ಲಿ ಹೆಚ್ಚಾಗಿ ಕಂಡುಬರುವ ಈ ಪಕ್ಷಿ, ಲಕ್ಷ್ಮೇಶ್ವರ ಭಾಗದಲ್ಲಿ ಕಾಣಿಸಿಕೊಂಡಿರುವುದು ಅಚ್ಚರಿ ಮೂಡಿಸಿದೆ.

ಈ ಪ್ರದೇಶದಲ್ಲಿ ಹಲವು ಬಗೆಯ ವಲಸೆ ಹಾಗೂ ಸ್ಥಳೀಯ ಪಕ್ಷಿಗಳು ಕಂಡುಬರುತ್ತಿದ್ದು, ಇದರ ಜತೆಗೆ ಈಗ ಹಾರ್ನ್‌ಬಿಲ್ ಪಕ್ಷಿಯೂ ಕಾಣಿಸಿಕೊಂಡಿರುವುದು ವಿಶೇಷ. ಹರದಗಟ್ಟಿ ಅರಣ್ಯ ಪ್ರದೇಶದಲ್ಲಿ ಹಾರಾಡುತ್ತಿದ್ದ ಹಾರ್ನ್‌ಬಿಲ್ ಪಕ್ಷಿಯನ್ನು ಛಾಯಾಗ್ರಾಹಕ ಸುರೇಶ ಲಮಾಣಿ ಕ್ಯಾಮೆರಾದಲ್ಲಿ ಸೆರೆಹಿಡಿದಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿದ ಅರಣ್ಯ ಇಲಾಖೆ ಅಧಿಕಾರಿ ''ಈ ಭಾಗದಲ್ಲಿ ಹಾರ್ನ್‌ಬಿಲ್ ಕಾಣಿಸಿಕೊಳ್ಳುವುದು ಅತ್ಯಂತ ಅಪರೂಪ. ಸಾಮಾನ್ಯವಾಗಿ ದಟ್ಟ ಅರಣ್ಯ ಪ್ರದೇಶಗಳಲ್ಲಿ ವಾಸಿಸುವ ಈ ಪಕ್ಷಿ ಇಲ್ಲಿ ಕಂಡುಬಂದಿರುವುದು ಪ್ರಕೃತಿಯ ವೈವಿಧ್ಯಕ್ಕೆ ಸಾಕ್ಷಿಯಾಗಿದೆ. ಮುಂದಿನ ದಿನಗಳಲ್ಲಿ ಇದರ ಕುರಿತು ಹೆಚ್ಚಿನ ಅಧ್ಯಯನ ನಡೆಸಲಾಗುವುದು'' ಎಂದು ತಿಳಿಸಿದ್ದಾರೆ.

'' ಹಾರ್ನ್‌ಬಿಲ್ ಉದ್ದ ಬಲಿಷ್ಠ ಕೊಕ್ಕು ಹೊಂದಿದ್ದು, ಹಳದಿ, ಕಂದು ಹಾಗೂ ಕಪ್ಪು ಬಣ್ಣಗಳ ಸಂಯೋಜನೆಯಿಂದ ಆಕರ್ಷಕವಾಗಿ ಕಾಣುತ್ತದೆ. ಅದರ ರೆಕ್ಕೆಗಳ ಕೆಳಭಾಗ ಚಾಕೊಲೇಟ್ ಬಣ್ಣದಲ್ಲಿದ್ದು, ಕೊಕ್ಕರೆ ಹೋಲುವ ಆಕಾರ ಹೊಂದಿದ್ದರೂ, ಅದರ ಕೊಕ್ಕಿನ ವಿನ್ಯಾಸ ಮತ್ತು ದೇಹದ ರಚನೆ ಇದನ್ನು ಇತರ ಪಕ್ಷಿಗಳಿಗಿಂತ ಭಿನ್ನವಾಗಿಸಿದೆ,'' ಎನ್ನುತ್ತಾರೆ ಛಾಯಾಗ್ರಾಹಕ ಸುರೇಶ ಲಮಾಣಿ.

ಹರದಗಟ್ಟಿ ಅರಣ್ಯದಲ್ಲಿ ಇದರ ಆಗಮನ ಅರಣ್ಯ ಮತ್ತು ಪಕ್ಷಿ ಸಂರಕ್ಷಣೆಗೆ ಹೆಚ್ಚಿನ ಆದ್ಯತೆ ನೀಡುವ ಅಗತ್ಯವಿದೆ ಎಂಬುದು ಪರಿಸರಪ್ರಿಯರ ಆಶಯವಾಗಿದೆ.




ಲಕ್ಷ್ಮೇಶ್ವರ ತಾಲೂಕಿನ ಹರದಗಟ್ಟಿ ಗ್ರಾಮದ ಸಂರಕ್ಷಿತ ಅರಣ್ಯ ಪ್ರದೇಶದಲ್ಲಿ ಹಾರ್ನ್‌ಬಿಲ್ ಪಕ್ಷಿ ಹಾರಾಡುತ್ತಿರುವ ದೃಶ್ಯ.

Udayavani Pg.05

Pg.2

# Agri officer exams put on hold amid eligibility row

## Students protest KEA move to allow BE, BTech grad to apply for posts

EXPRESS NEWS SERVICE
@Bengaluru



Members of the Akhil Karnataka Agriculture Association and students demand the withdrawal of the recruitment examinations for the Agriculture Officer and Assistant Agriculture Officer posts at Freedom Park on Thursday | NAGARAJA GADEKAL

CHIEF Minister DK Shivakumar on Thursday announced the temporary postponement of the Karnataka Examinations Authority (KEA) recruitment examinations for the posts of Agriculture Officer (AO) and Assistant Agriculture Officer (AAO), which were scheduled to be held on August 8 and 9.

The decision comes amid protests by agriculture students against the KEA's move to allow Bachelor of Engineering (BE) and Bachelor of Technology (BTech) graduates to apply for the posts. The students argued that only candidates with agricultural qualifications should be eligible. However, Shivakumar did not clarify whether the rescheduled examinations would exclude BE and BTech candidates.

Students from the Gandhi Krishi Vigyana Kendra (GKVK), the main campus of the University of Agricultural Sciences (UAS), who had been protesting the eligibility criteria, met the CM on August 4 and submitted their grievances.

In a post on X, Shivakumar said, "On August 4, when students met me and shared their concerns, I could understand their anxiety and the uncertainty they were facing. I assured them that their genuine concerns would be addressed with sensitivity and fairness. Keeping the future of our agriculture graduates in mind, we have decided to temporarily postpone the Agriculture Officer recruitment examination."

Meanwhile, IT/BT and Home Minister Priyank Kharge visited Freedom Park to meet the protesting students and appealed to them to end their agitation.

### KEA invites applications for horticulture posts

The Karnataka Examinations Authority (KEA) has invited applications for the posts of assistant horticulture director and assistant horticulture officer. The deadline for the submission of applications is August 30 and last date to pay the fee is August 31. "Applications are invited for five posts of Assistant Horticulture Director in the residual cadre and 75 posts in the Assistant Horticulture Officer position," said executive director H Prasanna.

### KARNATAKA EYES PARTNERSHIP WITH ANTHROPIC

Chief Minister DK Shivakumar on Thursday met a delegation from US-based AI company Anthropic to explore a long-term partnership aimed at accelerating the adoption of AI across various departments of the government. The meeting, facilitated by IT/BT and Home Minister Priyank Kharge, was part of the state's efforts to engage global AI leaders in strengthening Karnataka's artificial intelligence ecosystem. During the meeting, Shivakumar highlighted the state's proposed AI university as a demonstration of Karnataka's commitment to advancing AI capabilities.

Ind. Exp. Pg.05

# ಕೃಷಿ ಇಲಾಖೆ ಹುದ್ದೆ ನೇಮಕಾತಿ ಮುಂದೂಡಿಕೆ

■ **ವಿಕ ಸುದ್ದಿಲೋಕ** ಬೆಂಗಳೂರು

ಕೃಷಿ ಇಲಾಖೆಯ ನಾನಾ ಹುದ್ದೆಗಳ ನೇಮಕಾತಿಗೆ ಆ.8 ಮತ್ತು 9ಕ್ಕೆ ನಿಗದಿಪಡಿಸಿರುವ ಪರೀಕ್ಷೆಯನ್ನು ಮುಂದೂಡಲು ರಾಜ್ಯ ಸರಕಾರ ತೀರ್ಮಾನಿಸಿದೆ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಘೋಷಿಸಿದರು. ಇದರ ಬೆನ್ನಲ್ಲೆ ಕೃಷಿ ಪದವೀಧರರು ತಮ್ಮ ಪ್ರತಿಭಟನೆಯನ್ನು ಹಿಂಪಡೆದರು.



ಕೃಷಿ ಇಲಾಖೆಯ ನಾನಾ ಹುದ್ದೆಗಳ ನೇಮಕಾತಿಯಲ್ಲಿ ಐಸಿಎಆರ್ ಮಾನ್ಯತೆ ಪಡೆದ ಕೃಷಿ ಪದವೀಧರರಿಗೆ ಮಾತ್ರ ಅವಕಾಶ ನೀಡಬೇಕೆಂಬುದೂ ಸೇರಿದಂತೆ ವಿವಿಧ ಬೇಡಿಕೆಗಳಿಗೆ ಒತ್ತಾಯಿಸಿ, ರಾಜ್ಯದ ಕೃಷಿ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳು, ಪದವೀಧರರು ಸುಮಾರು 20 ದಿನಗಳಿಂದ ವಿವಿಧೆಡೆಯಲ್ಲಿ ಶಾಂತಿಯುತ ಪ್ರತಿಭಟನೆ ನಡೆಸಿದ್ದರು. ಇಲಾಖೆಯ ಹುದ್ದೆಗಳಿಗೆ ಆ.8 ಮತ್ತು 9ರಂದು ಪರೀಕ್ಷೆ ನಿಗದಿಯಾಗಿದ್ದರೂ ಅದನ್ನು ರದ್ದುಪಡಿಸಲು ಸರಕಾರ ನಿರ್ಲಕ್ಷ್ಯ ಮಾಡುತ್ತಿದೆ. ವಿದ್ಯಾರ್ಥಿಗಳ ವಿರೋಧದ ಮಧ್ಯೆಯೂ ಸರಕಾರ ಏಕಪಕ್ಷೀಯವಾಗಿ ನೇಮಕಾತಿ ಪರೀಕ್ಷೆಯ ಪ್ರವೇಶ ಪತ್ರಗಳನ್ನು ಬಿಡುಗಡೆ ಮಾಡಿದೆ ಎಂದು ಆಕ್ರೋಶ ವ್ಯಕ್ತಪಡಿಸಿ, ಕರ್ನಾಟಕದ ಕೃಷಿ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳು, ಗುರುವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸುತ್ತಿದ್ದರು.

ಈ ವೇಳೆ ಸರಕಾರದ ಪ್ರತಿನಿಧಿಯಾಗಿ ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಗೃಹ ಸಚಿವ ಪ್ರಿಯಾಂಕ್ ಖರ್ಗೆ ವಿದ್ಯಾರ್ಥಿಗಳ ಅಹವಾಲು ಆಲಿಸಿ, "ಕೃಷಿ ಅಧಿಕಾರಿ ನೇಮಕಾತಿಯ ಪರೀಕ್ಷೆಯನ್ನು ತಾತ್ಕಾಲಿಕವಾಗಿ ಮುಂದೂಡಲು ಸರಕಾರ ತೀರ್ಮಾನಿಸಿದೆ. ನಮ್ಮ ಕೃಷಿ ಪದವೀಧರರಿಗೆ ಕಿಂಚಿತ್ತೂ ಅನ್ಯಾಯವಾಗದಂತೆ ಪರೀಕ್ಷೆ ನಡೆಸಲು ದೃಢ ಸಂಕಲ್ಪಮಾಡಿದೆ ಎಂದು ಮುಖ್ಯಮಂತ್ರಿ ಅವರು ಸಂದೇಶ ನೀಡಿದ್ದಾರೆ," ಎಂದು ತಿಳಿಸಿದರು.

"ಯುವಕರು ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆಯಲ್ಲಿ ಭಾಗಿಯಾಗಬಾರದೆಂದು ಸರಕಾರ ಹಂತಹಂತವಾಗಿ ಬೇರೆಬೇರೆ ಇಲಾಖೆಗಳಲ್ಲಿನ 74 ಸಾವಿರ ಹುದ್ದೆಗಳನ್ನು ನೇಮಕ ಮಾಡಿಕೊಳ್ಳುವ ಯೋಚನೆ ಮಾಡಿದೆ. ಇದು ನಿಮ್ಮದೇ ಸರಕಾರ, ನಿಯಮಗಳಲ್ಲಿನ ಲೋಪವನ್ನು ಸರಿಪಡಿಸಲು ಸರಕಾರ ಸಿದ್ಧವಿದೆ. ಅದಕ್ಕಾಗಿ ಸಮಿತಿಯೊಂದನ್ನು ನೇಮಕ ಮಾಡಿ ಸಿ ಆ್ಯಂಡ್ ಆರ್ ನಿಯಮ ಬದಲಾವಣೆ, ಸರಳೀಕರಣ ಮಾಡಿ 15 ದಿನದಲ್ಲಿ ಸಮಿತಿ ಕೊಟ್ಟವರದಿ ಆಧರಿಸಿ ಕ್ರಮ ಕೈಗೊಳ್ಳಲಾಗುತ್ತದೆ," ಎಂದರು.

ಸಚಿವರು ಪರೀಕ್ಷೆ ಮುಂದೂಡಿಕೆ ತೀರ್ಮಾನ ಪ್ರಕಟಿಸಿದ ಬೆನ್ನಲ್ಲೇ ವಿದ್ಯಾರ್ಥಿಗಳು ಪ್ರತಿಭಟನೆ ಹಿಂಪಡೆದರು. ಪ್ರತಿಭಟನೆಗೆ ನಿವೃತ್ತ ನ್ಯಾಯಮೂರ್ತಿ ಗೋಪಾಲಗೌಡ ಕೂಡ ಬೆಂಬಲ ನೀಡಿದ್ದರು.

### ಬೇಡಿಕೆಗಳೇನು?

- ಕೃಷಿ ಇಲಾಖೆಯ ನಾನಾ ಹುದ್ದೆಗಳ ನೇಮಕಾತಿ ಸಂಬಂಧ ಆ.8, 9ಕ್ಕೆ ನಿಗದಿಪಡಿಸಿರುವ ಪರೀಕ್ಷೆಯನ್ನು ರದ್ದುಮಾಡಬೇಕು
- ಸಿ ಆ್ಯಂಡ್ ಆರ್ ಲೋಪದೋಷ ಸರಿಪಡಿಸಿ ಮರು ಅಧಿಸೂಚನೆ ಪ್ರಕಟಿಸಬೇಕು.
- ಐಸಿಎಆರ್ ಮಾನ್ಯತೆ ಪಡೆದ ಕೃಷಿ ಪದವೀಧರರಿಗೆ ಮಾತ್ರ ಅವಕಾಶ ನೀಡಬೇಕು.
- ಬಿಇ ಬಯೋಟೆಕ್‌ಗೆ ನೀಡಿದ ಅರ್ಹತೆಯನ್ನು ತಕ್ಷಣ ಹಿಂಪಡೆಯಬೇಕು.

### ನೇಮಕಾತಿ ಅಧಿಸೂಚನೆ ರದ್ದು

ಕೃಷಿ ಅಧಿಕಾರಿಗಳು ಹಾಗೂ ಸಹಾಯಕ ಕೃಷಿ ಅಧಿಕಾರಿ ಹುದ್ದೆಗಳ ನೇರ ನೇಮಕಾತಿಗೆ ಹೊರಡಿಸಿದ್ದ ಅಧಿಸೂಚನೆಯನ್ನು ಸರಕಾರ ಹಿಂಪಡೆದಿದೆ. ಕೃಷಿ ಇಲಾಖೆಯ 128 ಕೃಷಿ ಅಧಿಕಾರಿಗಳು ಹಾಗೂ 817 ಸಹಾಯಕ ಕೃಷಿ ಅಧಿಕಾರಿ ಹುದ್ದೆಗಳ ಭರ್ತಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು (ಕೆಇಎ) ನೇಮಕಾತಿ ಅಧಿಸೂಚನೆ ಹೊರಡಿಸಿತ್ತು. ಸರಕಾರದ ಸೂಚನೆಯಂತೆ ಈ ನೇಮಕಾತಿ ಅಧಿಸೂಚನೆ ರದ್ದುಪಡಿಸಲಾಗಿದೆ ಎಂದು ಕೃಷಿ ಇಲಾಖೆ ಆಯುಕ್ತರು ಆದೇಶದಲ್ಲಿ ತಿಳಿಸಿದ್ದಾರೆ.

Vijayakarnataka Pg.02

# Experts welcome proposed ban on deadly paraquat herbicide

BENGALURU, DHNS



**HEALTH RISKS**

- Primarily affects the lungs and kidneys.
- Can cause pulmonary fibrosis, a serious lung disease.
- Studies have linked exposure to Parkinson's disease.
- Also associated with other neurological disorders.

The Union government's proposal to ban Paraquat Dichloride, a herbicide known for its acute toxicity, was welcomed on Thursday by the Alliance for Sustainable and Holistic Agriculture (ASHA)-Kisan Swaraj.

In a letter to the Ministry of Agriculture and Farmers Welfare, ASHA-Kisan Swaraj co-convenor Kavitha Kuruganti said paraquat has been banned in more than 70 countries because of its adverse health effects.

The herbicide primarily affects the lungs and kidneys, with pulmonary fibrosis being one of the most common consequences of exposure. Studies have also linked paraquat exposure to Parkinson's disease and other neurological disorders.

"The proposed ban is an important step towards promoting safer and more sustainable agricultural practices. Reducing dependence on highly hazardous pesticides encourages the adoption of safer alternatives and environmentally responsible farming systems that protect soil and human health, biodiversity and water resources," the statement, endorsed by 272 others, said.

In a separate memorandum, public policy expert Narasimha Reddy Donthi also welcomed the proposal, but urged the government to ensure that the ban is effectively enforced.

He said almost all paraquat used in India is imported from China and Taiwan, while domestic companies are largely involved in formulation, packaging and marketing rather than manufacturing the active ingredient.

"Reports from June 2026 indicate a surge in procurement from Chinese suppliers as Indian importers, anticipating regulatory action, sought to secure supplies ahead of any restriction," he said.

Donthi urged the government to provide a clear transition mechanism for consignments already imported, contracted or in transit without delaying the ban on fresh manufacture. He also said the prohibition should extend to the manufacture of paraquat meant for export.

Deccan Herald Pg.3B

Deccan Herald Pg.07

# Nano fertilisers can bring self-reliance to India, but we need a strategy

VIJAY KANURU

India's journey towards self-reliance is often imagined in steel, semiconductors and satellites. Rarely do we imagine it in a farmer's hand holding a 500 ml bottle of fertiliser.

Yet strategic autonomy is ultimately a story about dependencies. Every nation must periodically ask itself a simple question: What can we not afford to run out of? For India, fertilisers belong on that list.

The recent geopolitical tensions in West Asia have served as a reminder that agriculture is not insulated from global events. Modern urea production depends heavily on natural gas, while India's fertiliser ecosystem remains intertwined with international supply chains. Roughly 30-50 per cent of the country's total finished fertiliser requirement is met through imports, while India's fertiliser subsidy bill has repeatedly crossed Rs 1.75 lakh crore in recent years—1 per cent of the GDP.

Though this is agricultural expenditure, it is also a recurring payment for geopolitical vulnerability.

Nitrogen is energy in disguise. That is why nano fertilisers deserve attention, not simply as an agricultural innovation, but as a strategic one.

India commercially launched nano urea in 2021 through the Indian Farmers Fertiliser Cooperative (IFFCO). The premise is deceptively simple: deliver nutrients more efficiently using ultra-small formulations, thereby reducing the total quantity of fertiliser required.

The implications, however, are much larger.

Adoption has accelerated rapidly. According to government data, cumulative sales of nano fertilisers have crossed 1,593 lakh bottles, including more than 1,219 lakh bottles of nano urea. Simultaneously, the government is increasingly integrating nano inputs into its broader vision of precision and drone-led agriculture, viewing them as part of a larger transition towards lower-input, technology-enabled farming.

Conventional urea exhibits nutrient-use efficiencies of roughly 30 to 40 per cent, with the remainder lost to volatilisation, runoff and leaching. Nano formulations seek to improve uptake while reducing application volumes. If even a portion of India's conventional fertiliser demand can be substituted through more efficient delivery systems, the benefits would extend well beyond the farm.

Less fertiliser consumed means fewer imports. Fewer imports mean reduced exposure to geopolitical shocks. Lower volumes translate into reduced logistics costs, lower subsidy leakages and a smaller environmental footprint.

Nano fertilisers offer reliance, which is something policymakers increasingly value.

The conversation around self-reliance often focuses on manufacturing. India wants to build its own chips, aircraft components and batteries. These ambitions are both necessary and commendable. But strategic autonomy is not achieved only by producing more; it is equally achieved by needing less.

Efficiency is the most underrated form of self-reliance. This is particularly true in agriculture. Conventional fertilisers are embedded with imported natural gas, freight costs, subsidy commitments and foreign exchange outflows. Every reduction in fertiliser intensity marginally strengthens India's strategic position.

For decades, agricultural success was measured in tonnes-more fertiliser, more inputs, more output. But the future may belong to precision rather than volume. A nation that can achieve comparable outcomes using fewer resources is not merely more efficient; it is more secure.

This is particularly relevant for a country of India's scale. Moving millions of tonnes of fertiliser across states each year imposes high logistical, financial and environmental costs. A shift towards lower-volume, higher-efficiency inputs could fundamentally alter the economics of agricultural support.

The government's PM-PRANAM initiative recognises this logic by incentivising states that reduce chemical fertiliser consumption and redirecting a portion of subsidy savings towards agricultural development. In that sense, nano fertilisers are increasingly becoming an instrument of fiscal and strategic policy.

## Need for more studies

However, nano fertilisers are not a universal solution for every crop or soil condition. Their effectiveness depends on how precisely formulations are matched to plant biology, nutrient pathways, soil chemistry and local growing conditions. Evidence to date suggests they are best viewed as complements to, rather than wholesale replacements for, conventional fertilisers in many farming systems. Published studies have reported variable outcomes across crops and agro-climatic conditions, underscoring the need for robust, crop-specific validation.

The future of nano farming is therefore unlikely to rest on a single product. Instead, it may resemble a library of crop-, nutrient- and soil-specific formulations tailored to India's extraordinary agricultural diversity. A paddy field in Punjab, a cotton farm in Maharashtra, Chilli cultivation in Andhra and a millet crop in Karnataka are unlikely to respond identically to the same nano intervention.

Policymakers appear to recognise this. All nano-fertiliser manufacturers have been directed to conduct bio-efficacy trials under the supervision of State Agricultural Universities and the Indian Council of Agricultural Research across different agro-climatic zones. In parallel, ICAR has launched a network project, *Evaluation of Nano Urea on Crop Productivity and Nitrogen Use Efficiency in Diverse Agro-Ecological Zones of India*, to systematically assess performance across multiple crops and environments. The objective is straightforward: determine where nano fertilisers work, where they do not, and why.

The government should now move beyond promotion and continue building the regulatory architecture for the sector. India needs clear standards for efficacy, crop-specific approvals, post-market surveillance and transparent performance reporting. Precision, not substitution, is likely to define the next chapter of Indian agriculture.

Perhaps that is the deeper lesson. Self-reliance is also about systematically reducing vulnerabilities wherever they exist. India's next self-reliance story may not come only from a rocket launch or a semiconductor plant. It can also come in a 500 ml bottle.

*(The writer is a Gates Cambridge Scholar, Helmholtz Research Fellow and the founder of Nanoved Research Foundation)*

THE TIMES OF INDIA, BENGALURU
FRIDAY, AUGUST 7, 2026


**ICAR-CENTRAL RESEARCH INSTITUTE FOR DRYLAND AGRICULTURE**
Santoshnagar, Saidabad Post, Hyderabad-500 059
Advt.No.11/2026/SCSP

Temporary position of Young Professional-I (01 No.) is to be filled up through Walk-in-Interview scheduled on 20.08.2026 at 10.00 Hrs. at the Office of ADA & Head, District Agricultural Training Centre, Kalaburagi for engagment at Chincholi / (Kalaburagi) project site.
For details, visit http://www.icar-crida.res.in/

Sd/- Asst. Administrative Officer


Pg.13

Pg.4

# ಬರಕ್ಕೆ ಕಂಗೆಟ್ಟ ರಾಗಿ, ನೆಲಗಡಲೆ ಕಣಜ

## ರಾಜ್ಯದ ದಕ್ಷಿಣ ಒಳನಾಡಲ್ಲಿ ಬಿತ್ತನೆ ಸ್ಥಗಿತ । ಆಹಾರ ಬೆಳೆಗಳಿಗೆ ಭಾರಿ ಹೊಡೆತ

■ **ಶಶಿಧರ್ ಎಸ್.ದೋಣಿಹಕ್ಲು** ತುಮಕೂರು
shashidara.ds@timesofindia.com

ಕಣ್ಣು ಹಾಯಿಸಿದಷ್ಟೂ ಆಕಾಶದಲ್ಲಿ ಬೆಳ್ಳನೆಯ ಮೋಡಗಳು ತೇಲಿಬರುತ್ತಿವೆ. ಆಗಾಗ ತುಂತುರು ಮಳೆ ಬಿದ್ದು ರಣ್ಣೆಯ ದೂಳು ಶಮನವಾಗುತ್ತಿದೆಯೇ ಹೊರತು, ಮಣ್ಣಿನ ಆಳಕ್ಕಿಳಿದು ಬೀಜ ಮೊಳಕೆಯೊಡೆಯುವಷ್ಟು ನೀರು ಸಿಗುತ್ತಿಲ್ಲ. ಮುಂಗಾರು ಹಂಗಾಮಿನ ಅರ್ಧ ಅವಧಿ ಕಳೆಯುತ್ತ ಬಂದರೂ ದಕ್ಷಿಣ ಒಳನಾಡಿನ ಕೃಷಿ ಭೂಮಿ ಇನ್ನೂ ಒಣಗಿಯೇ ಬಿದ್ದಿದೆ. ಕೃಷಿ ಇಲಾಖೆಯ ಆಂಕಿ-ಅಂಶಗಳೇ ಈ ಆತಂಕಕಾರಿ ವಾಸ್ತವವನ್ನು ಬಿಚ್ಚಿಟ್ಟಿದ್ದು, ಬೆಂಗಳೂರು ಸುತ್ತಮುತ್ತಲಿನ ಐದು ಜಿಲ್ಲೆಗಳಲ್ಲಿ ಬಿತ್ತನೆ ಕಾರ್ಯ ಸಂಪೂರ್ಣ ತಟಸ್ಥಗೊಂಡಿದೆ.



**ಮುಂಗಾರು ಮಳೆ ಕೊರತೆ**

| ಜಿಲ್ಲೆ | ಮಳೆ ಕೊರತೆ |
|---|---|
| ಬೆಂಗಳೂರು ಗ್ರಾ. | 66% |
| ಕೋಲಾರ | 44% |
| ಬೆಂಗಳೂರು ದಕ್ಷಿಣ | 32% |
| ಚಿಕ್ಕಬಳ್ಳಾಪುರ | 25.47% |
| ತುಮಕೂರು | 23.79% |

**ಶೇ.5ರ ಗಡಿಯನ್ನೂ ದಾಟದ ಬಿತ್ತನೆ**

ಸಾಮಾನ್ಯವಾಗಿ ಈ ವೇಳೆಗೆ ಶೇ. 50ಕ್ಕೂ ಹೆಚ್ಚು ಬಿತ್ತನೆ ಪೂರ್ಣಗೊಳ್ಳಬೇಕಿತ್ತು. ಆದರೆ, ಪ್ರಸ್ತುತ ಪರಿಸ್ಥಿತಿ ತೀರಾ ಕಳವಳಕಾರಿಯಾಗಿದೆ. ತುಮಕೂರು- ಶೇ.9.38, ಕೋಲಾರ- ಶೇ.4.80, ಚಿಕ್ಕಬಳ್ಳಾಪುರ- ಶೇ.3.21, ಬೆಂಗಳೂರು ಗ್ರಾಮಾಂತರ-ಶೇ.3.00 ಹಾಗೂ ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ ಶೇ.1.37ರಷ್ಟು ಬಿತ್ತನೆಯಾಗಿದೆ.

**ಬಿತ್ತಲು ಭಯ, ಕಾದು ನೋಡುವ ತಂತ್ರ:** ತುಮಕೂರು, ಬೆಂಗಳೂರು ದಕ್ಷಿಣ (ರಾಮನಗರ), ಬೆಂಗಳೂರು ಗ್ರಾಮಾಂತರ, ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಮುಂಗಾರು ಮಳೆ ಸಂಪೂರ್ಣ ಕೈಕೊಟ್ಟಿದೆ. ಭೂಮಿಯಲ್ಲಿ ತೇವಾಂಶವೇ ಇಲ್ಲದಿರುವುದರಿಂದ ಬಿತ್ತಿದ ಬೀಜ ಮಣ್ಣಲ್ಲೇ ಸತ್ತುಹೋಗಬಹುದೆಂಬ ಭೀತಿಯಲ್ಲಿ ರೈತರು ಸಾಲ ಸೋಲ ಮಾಡಿ ತಂದ ಬಿತ್ತನೆ ಬೀಜ-ಗೊಬ್ಬರವನ್ನು ಮೂಟೆಯಲ್ಲೇ ಇಟ್ಟು ಕಾಯುತ್ತಿದ್ದಾರೆ. ದಕ್ಷಿಣ ಒಳನಾಡಿನ ಈ ಐದು ಜಿಲ್ಲೆಗಳಲ್ಲಿ ರಾಗಿ, ಕಡಲೆಕಾಯಿ ನೇರಿದಂತೆ ಆಹಾರ ಧಾನ್ಯಗಳನ್ನು ಯಥೇಚ್ಛವಾಗಿ ಬೆಳೆಯಲಾಗುತ್ತಿದೆ. ಈ ಜಿಲ್ಲೆಗಳು ಪ್ರಮುಖವಾಗಿ ರಾಗಿ-ನೆಲಗಡಲೆ ಕಣಜವಾಗಿದ್ದು, ಮುಂಗಾರು ಬರ ಆಹಾರ ಧಾನ್ಯಗಳನ್ನು ಬೆಳೆಯಲು ಭಾರಿ ಹೊಡೆತ ನೀಡಿದೆ.

ದಕ್ಷಿಣ ಕರ್ನಾಟಕದ ಮುಖ್ಯ ಆಹಾರ ಹಾಗೂ ರೈತರ ಜೀವನಾಡಿಯಾಗಿರುವ ರಾಗಿ ಬೆಳೆ ಈ ಬಾರಿ ತೀವ್ರ ಸಂಕಷ್ಟಕ್ಕೆ ಸಿಲುಕಿದೆ. ತುಮಕೂರಿನಲ್ಲಿ 1.66 ಲಕ್ಷ ಹೆಕ್ಟೇರ್, ಬೆಂಗಳೂರು ಗ್ರಾಮಾಂತರದಲ್ಲಿ 64 ಸಾವಿರ ಹೆಕ್ಟೇರ್, ಚಿಕ್ಕಬಳ್ಳಾಪುರದಲ್ಲಿ 47,700 ಹೆಕ್ಟೇರ್, ಬೆಂಗಳೂರು ದಕ್ಷಿಣದಲ್ಲಿ 65,000 ಹೆಕ್ಟೇರ್ ಹಾಗೂ ಕೋಲಾರದಲ್ಲಿ 54 ಸಾವಿರ ಹೆಕ್ಟೇರ್ ಗ್ರಾಹಕರಿಗೆ 'ದರ ಬಸ' ತಟ್ಟಲಿದೆ.

**ಐದು ಜಿಲ್ಲೆಗಳ ಕೃಷಿ ಆಂಕಿ-ಅಂಶ**

| ಜಿಲ್ಲೆ | ಪ್ರಮುಖ ಬೆಳೆಗಳು | ಬಿತ್ತನೆ ಗುರಿ (ಹೆ.ಗಳಲ್ಲಿ) | ಬಿತ್ತನೆ (ಹೆ.ಗಳಲ್ಲಿ) |
|---|---|---|---|
| ತುಮಕೂರು | ರಾಗಿ, ಮೆಕ್ಕೆಜೋಳ, ನೆಲಗಡಲೆ | 3,11,657 | 29,243.60 |
| ಕೋಲಾರ | ರಾಗಿ, ನೆಲಗಡಲೆ, ತೊಗರಿ | 85,801 | 4,119.00 |
| ಚಿಕ್ಕಬಳ್ಳಾಪುರ | ರಾಗಿ, ಜೋಳ, ನೆಲಗಡಲೆ | 1,26,854 | 4,066 |
| ಬೆಂಗಳೂರು ಗ್ರಾಮಾಂತರ | ರಾಗಿ, ತೊಗರಿ, ನೆಲಗಡಲೆ | 74,000 | 2,255 |
| ಬೆಂ. ದಕ್ಷಿಣ | ರಾಗಿ, ಎಳ್ಳು, ತೊಗರಿ | 80,758 | 1,106 |

ನಾವೀಗ ಅತ್ಯಂತ ಭೀಕರ ಬರ ಪರಿಸ್ಥಿತಿ ಎದುರಿಸುತ್ತಿದ್ದೇವೆ. ಮಳೆ ಕೊರತೆಯಿಂದ ಬಿತ್ತನೆ ಕುಂಠಿತವಾಗಿದೆ. ಬರ ಘೋಷಣೆ ನಿಯಮಾವಳಿ ಸಡಿಲಿಕೆಗೆ ಕೇಂದ್ರಕ್ಕೆ ಪತ್ರ ಬರೆಯಲಾಗಿದೆ. ಬರ ಪರಿಸ್ಥಿತಿ ಎದುರಿಸಲು ಸರಕಾರದ ಬಳಿ ಅನುದಾನ ಲಭ್ಯವಿದೆ. ರೈತರಿಗೆ ಆರ್ಥಿಕ ಭದ್ರತೆ ನೀಡಲು ಕಡ್ಡಾಯವಾಗಿ ವಿಮೆ ಯೋಜನೆಗೆ ನೋಂದಾಯಿಸಿಕೊಳ್ಳುವಂತೆ ಕ್ರಮವಹಿಸಲು ಅಧಿಕಾರಿಗಳಿಗೆ ನಿರ್ದೇಶಿಸಲಾಗಿದೆ.



**-ಡಾ.ಜಿ.ಪರಮೇಶ್ವರ್** ಉಪ ಮುಖ್ಯಮಂತ್ರಿ

Vijayakarnataka Pg.04

---

## ಸಂತಾನೋತ್ಪತ್ತಿಗೆ ಆಗಮಿಸಿದ 12 ಸಾವಿರಕ್ಕೂ ಹೆಚ್ಚು ಪಕ್ಷಿಗಳು

# ಗುಡವಿ ಬಾನಾಡಿಗಳ ಗುಡಾರ

■ **ಡಾ.ಎಸ್.ಎಂ.ನೀಲೇಶ್ ಸಮನೀ** ಸೊರಬ (ಶಿವಮೊಗ್ಗ)
samanee18@gmail.com

ಗುಡವಿ ಪಕ್ಷಿಧಾಮದಲ್ಲಿ ಸಂತಾನೋತ್ಪತ್ತಿಗೆ ಗುಂಪುಗುಂಪಾಗಿ ಕುಳಿತ ಪಕ್ಷಿಗಳ ಕಲರವ ಮುದ ನೀಡುತ್ತವೆ.

ಪಟ್ಟಣದಿಂದ 16 ಕಿ.ಮೀ. ದೂರದಲ್ಲಿರುವ ಗುಡವಿ ಪಕ್ಷಿಧಾಮ 182.32 ಎಕರೆ ಪ್ರದೇಶದಲ್ಲಿ ವಿಶಾಲವಾದ ಕೆರೆ, ಕಾಡಿನಲ್ಲಿ ವಿಸ್ತರಿಸಿಕೊಂಡಿದೆ. ವಿವಿಧ ಪ್ರದೇಶಗಳಿಂದ 43 ತಳಿಯ ಪಕ್ಷಿಗಳು ಜೂನ್‌ನಲ್ಲಿ ಇಲ್ಲಿಗೆ ವಲಸೆ ಬಂದು ಗೂಡುಕಟ್ಟಿ ಮೊಟ್ಟೆಗಳನ್ನಿಟ್ಟು ಮರಿಮಾಡಿಕೊಂಡು ಅಕ್ಟೋಬರ್‌ನಲ್ಲಿ ವಾಪಾಸಾಗುತ್ತವೆ.

ಈ ವರ್ಷ ಮಳೆ ಕೊರತೆಯಿಂದ ಜುಲೈನಲ್ಲಿ ಪಕ್ಷಿಗಳು ಬರಲಾರಂಭಿಸಿವೆ. 12 ಸಾವಿರಕ್ಕೂ ಹೆಚ್ಚು ಪಕ್ಷಿಗಳು ಆಗಮಿಸಿದ್ದು, ಪಕ್ಷಿ ಪ್ರೇಮಿಗಳು ಹಾಗೂ ಸಾರ್ವಜನಿಕರಿಗೆ ಬೆಳಗ್ಗೆ 6ರಿಂದ ಸಂಜೆ 6 ಗಂಟೆವರೆಗೆ ವೀಕ್ಷಣೆಗೆ ಅವಕಾಶವಿದೆ. ಪಕ್ಷಿಗಳನ್ನು ಹತ್ತಿರದಿಂದ ವೀಕ್ಷಿಸಲು ಪಕ್ಷಿಗಳ ವಾಚ್‌ಟವರ್‌ಗಳಿವೆ.

**ಪಕ್ಷಿಜಾಲ:** ಸ್ಥಳೀಯ ಪಕ್ಷಿಗಳಾದ ಹಳದಿ ಸಿಪಿಲಿ, ಹಾವು ಗಿಡುಗ, ಬೂದು ಕಾಡುಕೋಳಿ, ನವಿಲು, ಕೋಗಿಲೆ, ಮರಕುಟುಕ, ನೀಲಿ ನೋಣ ಹಿಡುಕ, ನಾಡ ಕಾಗೆ, ಗೊರವಂತ, ಸಿಂಪಿಗ ಹಕ್ಕಿ, ಬೂದು ಮಂಗಟ್ಟೆ, ಕರಿಕಾಜಾಣ, ಗೊಂಡ ಬಾಲದ ಕಾಜಾಣ, ಕುಟ್ಟಕ್ಕಿ, ಮಿಂಚುಳ್ಳಿ, ನೆಲ ಗುಬ್ಬಿ, ಪಾರಿವಾಳ ಇನ್ನಿತರ ಪಕ್ಷಿಗಳು ಕಂಡುಬರುತ್ತವೆ.

ಹೊರ ಪ್ರದೇಶದ ಪಕ್ಷಿಗಳಾದ ಬ್ಲಾಕ್ ಹೆಡ್ ಐಬಿಸ್, ಲಿಟಲ್ ಕಾರ್ಮೊರೆಂಟ್, ಪರ್ಪಲ್ ಹೆರಾನ್, ಪಾಂಡ್ ಹೆರಾನ್, ಏಷಿಯನ್ ಓಪನಿಲ್ ಸ್ಟಾರ್ಕ್, ವೈಟ್ ಸ್ಟಾರ್ಕ್, ಲಿಟಲ್ ಗ್ರೇಬ್, ಸ್ಪಾಟ್ ಬಿಲ್ಡ್ ಡಕ್, ಮೂರ್‌ಹೆನ್, ಕೋಟ್, ಡಾರ್ಟರ್, ನೈಟ್ ಹೆರಾನ್, ಕ್ಯಾಟಲ್ ಈಗ್ರೆಟ್, ಕಾಮನ್ ಸ್ಯಾಂಡ್ ಪೈಪರ್, ಗ್ರೇಟ್ ಈಗ್ರೆಟ್, ಬ್ಲಾಕ್ ಕಾರ್ಮೊರೆಂಟ್ ಹಕ್ಕಿಗಳು ಸಂತಾನೋತ್ಪತ್ತಿಗಾಗಿ ವಲಸೆ ಬರುತ್ತವೆ.

ತಮಿಳುನಾಡಿನ ರಾಜ್ಯಪಕ್ಷಿಯಾದ ಯುರೇಷಿಯನ್ ಸ್ಪೂನ್ ಬಿಲ್ ಪಕ್ಷಿಯು ಜುಲೈ ಕೊನೆ ಇಲ್ಲವೆ ಆಗಸ್ಟ್ ಮೊದಲ ವಾರದಲ್ಲಿ ಆಗಮಿಸುತ್ತವೆ. ಈ ಪಕ್ಷಿಗೆ ಸಂತಾನೋತ್ಪತ್ತಿಯ ಸಮಯದಲ್ಲಿ ತಲೆಯ ಹಿಂಭಾಗದಲ್ಲಿ ಬಿಳಿಯ ಉದ್ದ ಗರಿಗಳು ಬೆಳೆಯುವುದು ವಿಶೇಷ. ಫೆಸೆಂಟ್ ಟೇಲ್ಡ್ ಜಸಾನಾ ಪಕ್ಷಿ ನಾಲ್ಕು ವರ್ಷಗಳಿಂದ ಗುಡವಿಯಲ್ಲಿ ಕಾಣಿಸದಿರುವುದು ಪಕ್ಷಿ ಪ್ರೇಮಿಗಳಿಗೆ ಬೇಸರ ತರಿಸಿದೆ.

**ಬೇಸಿಗೆಯಲ್ಲಿ ನೀರಿನ ಕೊರತೆ:** ಬೇಸಿಗೆಯಲ್ಲಿ ಪಕ್ಷಿಗಳಿಗೆ ನೀರಿನ ಅಭಾವ ಇದೆ. ಎಸ್.ಬಂಗಾರಪ್ಪ ಅವರು ಮುಖ್ಯಮಂತ್ರಿಯಾಗಿದ್ದಾಗ ವರದಾ ನದಿಯಿಂದ ಗುಡವಿ ಪಕ್ಷಿಧಾಮಕ್ಕೆ ಏತ ನೀರಾವರಿ ಯೋಜನೆ ಕಲ್ಪಿಸಿದ್ದರು. ಕಾಮಗಾರಿ ಕೂಡ ಆರಂಭವಾಗಿತ್ತು. ನಂತರ ಅನುದಾನದ ಕೊರತೆಯಿಂದ ಕಾಮಗಾರಿ ಪೂರ್ಣಗೊಳ್ಳಲಿಲ್ಲ. ನಂತರದ ಜನಪ್ರತಿನಿಧಿಗಳು ಆ ಬಗ್ಗೆ ಇಚ್ಛಾಶಕ್ತಿ ತೋರಲಿಲ್ಲ. ಕಳೆದ ವರ್ಷ ಹೆಚ್ಚು ಮಳೆಯಾಗಿದ್ದರಿಂದ ಪಕ್ಷಿಧಾಮಕ್ಕೆ ನೀರಿನ ಕೊರತೆಯಾಗಿರಲಿಲ್ಲ. ಹೀಗಾಗಿ ಪಕ್ಷಿಗಳು ಪ್ರತಿ ವರ್ಷಕ್ಕಿಂತ 2 ತಿಂಗಳು ಹೆಚ್ಚು ಇದ್ದು, ನಂತರ ವಲಸೆ ಹೋಗಿವೆ. ಹೀಗಾಗಿ, ಪಕ್ಷಿಗಳು ಇಲ್ಲಿಯೇ ನೆಲೆಸಲು ಗುಡವಿ ಏತ ನೀರಾವರಿ ಮಾಡಿದ್ದಲ್ಲಿ ಅನುಕೂಲವಾಗಲಿದೆ.

**ಮಂಗಗಳಿಂದ ಪಕ್ಷಿ ಮೊಟ್ಟೆ ನಾಶ:** ಪಕ್ಷಿಗಳ ನೈಸರ್ಗಿಕ ಬದುಕಿಗೆ ಹಾಗೂ ಸಂತಾನೋತ್ಪತ್ತಿ ಕ್ರಿಯೆಗೆ ಮಂಗಗಳೇ ಮಾರಕ. ಹಿಂಡುಗಟ್ಟಲೆ ಮಂಗಗಳಿದ್ದು ಪಕ್ಷಿಗಳ ಮೊಟ್ಟೆಗಳನ್ನು ನಾಶ ಮಾಡುತ್ತಿವೆ. ಮೊಟ್ಟೆಗಳಿಗೆ ಕಾವು ನೀಡಲು ಕೂಡ ಪಕ್ಷಿಗಳನ್ನು ಕಾಡುತ್ತವೆ. ಹೀಗಾಗಿ ಮಂಗಗಳ ನಿಯಂತ್ರಣಕ್ಕೆ ಅರಣ್ಯ ಇಲಾಖೆ ಗಂಭೀರವಾಗಿ ಯೋಚಿಸಬೇಕಿದೆ.



ಗುಡವಿ ಪಕ್ಷಿಧಾಮದಲ್ಲಿ ಪಕ್ಷಿಗಳ ನೋಟ.

ಪ್ರವಾಸಿಗರಿಗೆ ಮೂಲ ಸೌಲಭ್ಯಗಳ ಅಗತ್ಯವಿದೆ. ಹೊರಭಾಗದಿಂದ ಆಗಮಿಸಿದ ಪಕ್ಷಿ ಪ್ರೇಮಿಗಳು ದಿನವಿಡಿ ಇಲ್ಲಿ ಕಾಲಕಳೆಯುವುದರಿಂದ ಹಸಿವು ನೀಗಿಸಿಕೊಳ್ಳಲು ಉಪಾಹಾರ ಗೃಹ ಇಲ್ಲದಿರುವುದು ಬೇಸರದ ಸಂಗತಿ. ವಿಶಾಲ ಕೆರೆ ಇದ್ದು ಹಿಂದೆ ಇದ್ದಂತೆ ಬೋಟಿಂಗ್ ವ್ಯವಸ್ಥೆ ಮಾಡಿದ್ದಲ್ಲಿ ಹೆಚ್ಚಿನ ಪ್ರವಾಸಿಗರನ್ನು ಸೆಳೆಯಲು ಅನುಕೂಲವಾಗುತ್ತದೆ.

**-ಡಾ.ಕೆ.ನವೀನ್** ಕುಳಗದ್ ಆಸ್ಪತ್ರೆ, ಸೊರಬ

ಪಕ್ಷಿಧಾಮದಲ್ಲಿ ಪಕ್ಷಿ ಸಂಕುಲ ಹಾಗೂ ಅವುಗಳ ಮೊಟ್ಟೆಗಳನ್ನು ಸಂರಕ್ಷಿಸಲು ಮಂಗಗಳ ಹಾವಳಿ ತಪ್ಪಿಸಬೇಕು. ಪಕ್ಷಿಗಳಿಗೆ ಸಮರ್ಪಕ ಆಹಾರ ನೀಡುವ ನಿಟ್ಟಿನಲ್ಲಿ ಹೆಚ್ಚು ಮೀನು ಮರಿಗಳನ್ನು ಬಿಡಿಸಬೇಕು.

**-ವಿನಾಯಕ ಹಳೆಮನೆ** ಪಕ್ಷಿ ಪ್ರೇಮಿ ಹಾಗೂ ಪ್ರವಾಸಿ, ಯಲ್ಲಾಪುರ

Vijayakarnataka Pg.spl.02

Pg.5

# ದಶಕದ ಪರಿಶ್ರಮ: ದೇಶದಲ್ಲಿ ಚಿಟ್ಟೆ ಕ್ಯಾಟಲಾಗ್

■ **ಜಾನ್ ಡಿಸೋಜ** ಕುಂದಾಪುರ
(ಉಡುಪಿ)
John.dsouza@timesofindia.com

ಭಾರತ 12 ವರ್ಷಗಳಿಗೂ ಹೆಚ್ಚು ಕಾಲದ ಪರಿಶ್ರಮದ ನಂತರ ಚಿಟ್ಟೆಗಳ ಮೊದಲ ಸಮಗ್ರ ಪಟ್ಟಿಯನ್ನು (ಕ್ಯಾಟಲಾಗ್) ಪೂರ್ಣಗೊಳಿಸಿದೆ. ಇದರಲ್ಲಿ 13,703 ಪ್ರಭೇದಗಳನ್ನು ದಾಖಲಿಸಲಾಗಿದೆ. ಒಂದು ಶತಮಾನಕ್ಕೂ ಹೆಚ್ಚು ಕಾಲದಿಂದ ಇದ್ದ ವರ್ಗೀಕರಣ ಸಂಬಂಧಿತ ಅಂತರಗಳನ್ನು (ಟ್ಯಾಕ್ಸೋನೋಮಿಕ್ ಗ್ಯಾಪ್ಸ್) ಇದು ತುಂಬಿದೆ ಎಂದು ಕೋಲ್ಕತ್ತಾದಲ್ಲಿರುವ ಝಡ್‌ಎಸ್‌ಐ (ಝೂಲಾಜಿಕಲ್ ಸರ್ವೆ ಆಫ್ ಇಂಡಿಯಾ) ವರದಿ ತಿಳಿಸಿದೆ.

**ನವೀಕೃತ ಮಾಹಿತಿ:** ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದ ಅಡಿಯಲ್ಲಿ ಝಡ್ ಎಸ್‌ಐ ಸಿದ್ಧಪಡಿಸಿರುವ ಈ ಪಟ್ಟಿಯು 22 ಸಂಪುಟಗಳಲ್ಲಿ ರೂಪುಗೊಂಡಿದೆ. ಡೆಹ್ರಾಡೂನ್‌ನ ವೈಲ್ಡ್‌ಲೈಫ್ ಇನ್ಸ್‌ಟಿಟ್ಯೂಟ್ ಆಫ್ ಇಂಡಿಯಾದ ತಾಂತ್ರಿಕ ಪರಿಣತಿ ಹಾಗೂ ವಿಷಯ ತಜ್ಞರ ನೆರವಿನೊಂದಿಗೆ ಈ ಕಾರ್ಯ ನಡೆದಿದೆ. ಇದು ಭಾರತೀಯ 'ಲೆಪಿಡೋಪ್ಟೆರಾ' (ಚಿಟ್ಟೆಗಳನ್ನು ಒಳಗೊಂಡ ಕೀಟಗಳ ವರ್ಗ) ಕುರಿತಾದ ನವೀಕೃತ ವರ್ಗೀಕರಣ ಮಾಹಿತಿ ಒದಗಿಸುತ್ತದೆ. ಭಾರತೀಯ ಪ್ರಾಣಿಶಾಸ್ತ್ರೀಯ ಸಮೀಕ್ಷೆಯ ವರ್ಗೀಕರಣ ತಜ್ಞರಾದ ಡಾ.ರಾಹುಲ್ ಜೋಶಿ ಮತ್ತು ಡಾ.ನವನೀತ್ ಸಿಂಗ್ ಅವರು ರಚಿಸಿರುವ ಈ ಸರಣಿಯ ಅಂತಿಮ ಸಂಪುಟವು 'ಝೂಟಾಕ್ಸಾ' ಎಂಬ ಅಂತಾರಾಷ್ಟ್ರೀಯ ಜರ್ನಲ್‌ನಲ್ಲಿ ಪ್ರಕಟವಾಗಿದೆ.



ಚಿಟ್ಟೆಗಳು ಪ್ರಮುಖ ಪರಾಗಸ್ಪರ್ಶಕಗಳಾಗಿವೆ. ಇವು ಸ್ಯಾಹಾರಿಗಳು ಮತ್ತು ಕೊಳೆತ ಸಾವಯವ ಪದಾರ್ಥಗಳನ್ನು ತಿನ್ನುತ್ತವೆ. ಇವುಗಳಲ್ಲಿನ ಅನೇಕ ಪ್ರಭೇದಗಳು ಕೃಷಿ ಮತ್ತು ಅರಣ್ಯಕ್ಷೇತ್ರದ ಮೇಲೂ ಗಮನಾರ್ಹ ಪರಿಣಾಮ ಬೀರುತ್ತಿವೆ. ಭಾರತದ ಜೀವವೈವಿಧ್ಯತೆಯ ಮೌಲ್ಯಮಾಪನ, ಪರಿಸರ ಸಂಬಂಧಿತ ಮೇಲ್ವಿಚಾರಣೆ ಮತ್ತು ಹವಾಮಾನ ಬದಲಾವಣೆಯ ಪರಿಣಾಮಗಳ ಕುರಿತಾದ ಅಧ್ಯಯನಗಳಿಗೆ ಅಗತ್ಯವಿರುವ ವೈಜ್ಞಾನಿಕ ಆಧಾರ ಈ ಚಿಟ್ಟೆ ಕ್ಯಾಟಲಾಗ್ ಒದಗಿಸಲಿದೆ.

**-ಪ್ರೊ.ವಿ.ಎಲ್.ಉಪಾಧ್ಯಾಯ** ಚಿಟ್ಟೆ ಅಧ್ಯಯನಕಾರ, ಕುಂದಾಪುರ

**ಸಮೀಕ್ಷೆ ಏನು ಹೇಳುತ್ತಿದೆ?:** ಭಾರತವು 3,705 ಕುಲಗಳು (ಜೀವರಾಶಿಗಳ ಗುಂಪು), 240 ಉಪಕುಟುಂಬಗಳು, 102 ಕುಟುಂಬಗಳು ಮತ್ತು 31 ಮಹಾಕುಟುಂಬಗಳಿಗೆ ಸೇರಿದ 13,703 ಬಗೆಯ ಪತಂಗಗಳ ತವರೂರಾಗಿದೆ. ಇದು ಜಗತ್ತಿನಲ್ಲಿ ತಿಳಿದಿರುವ 'ಲೆಪಿಡೋಪ್ಟೆರಾ' ವೈವಿಧ್ಯತೆಯ ಸುಮಾರು ಶೇ.8.25ರಷ್ಟನ್ನು ಪ್ರತಿನಿಧಿಸುತ್ತದೆ. ಕೊನೆ ಸಂಪುಟವು ಉಳಿದ 1,689 ಪ್ರಭೇದಗಳನ್ನು ಪಟ್ಟಿ ಮಾಡಿದೆ. ಜಿಯೋಮೆಟ್ರಿಡೆ ಯಿಡಿಯಾ ಎಂಬ ಪತಂಗದ ಸೂಪರ್ ಕುಟುಂಬದ ಮೀನಲಾದ ಕ್ಯಾಟಲಾಗ್‌ನಲ್ಲಿ ಭಾರತದಲ್ಲಿ 479 ಕುಲಗಳ ಅಡಿಯಲ್ಲಿ 2,205 ಜಾತಿಗಳು, 13 ಉಪಕುಟುಂಬಗಳು ಮತ್ತು ನಾಲ್ಕು ಕುಟುಂಬಗಳನ್ನು ದಾಖಲಿಸಿರುವುದು ಪ್ರಮುಖ ಅಂಶ ವೆನಿಸಿದೆ. ಜಿಯೋಮೆಟ್ರಿಡೆಯಿಡಿಯಾ ಸೂಪರ್ ಕುಟುಂಬದಲ್ಲಿ ವಿಶ್ವದ ತಿಳಿದಿರುವ ವೈವಿಧ್ಯತೆಯ ಸುಮಾರು ಶೇ.8.8ರಷ್ಟು ಪ್ರತಿನಿಧಿಸುತ್ತವೆ ಎಂದು ಸಮೀಕ್ಷೆ ಹೇಳುತ್ತಿದೆ.

ನಾಲ್ಕು ಕುಟುಂಬಗಳಲ್ಲಿ ಜಿಯೋಮೆಟ್ರಿಡೆ 2,100 ಜಾತಿಗಳೊಂದಿಗೆ ದೊಡ್ಡದಾಗಿದೆ. ನಂತರ 95 ಜಾತಿಗಳೊಂದಿಗೆ ಯುರಾನಿಡೇ, ಒಂಬತ್ತು ಜಾತಿಗಳೊಂದಿಗೆ ಎಪಿಕೋಪಿಡೆ ಮತ್ತು ಒಂದೇ ಜಾತಿಯೊಂದಿಗೆ ಸ್ಯೂಡೋಬಿಸ್ಟೋನಿಡೆ ಇವೆ. ಸೆಮಾಚುರಿಡೇ ಕುಟುಂಬವು ಭಾರತದಲ್ಲಿ ಇಲ್ಲ. ಅತ್ಯಂತ ಸಮೃದ್ಧ ಉಪಕುಟುಂಬಗಳೆಂದರೆ 895 ಜಾತಿಗಳನ್ನು ಹೊಂದಿರುವ ಎನೋಮಿನೆ, 565 ಜಾತಿಗಳನ್ನು ಹೊಂದಿರುವ ಲಾರೆಂಟಿನೆ ಮತ್ತು 309 ಜಾತಿಗಳನ್ನು ಹೊಂದಿರುವ ಜಿಯೊಮೆಟ್ರಿನೆ ಎಂದು ವಿವರಿಸಿದೆ. ಸಮೀಕ್ಷೆ ವ್ಯಾಪಕವಾದ ಕ್ಷೇತ್ರ ಸಮೀಕ್ಷೆಗಳು, ವಸ್ತು ಸಂಗ್ರಹಾಲಯ ಸಂಗ್ರಹಗಳ ಪರೀಕ್ಷೆ ಮತ್ತು ಒಂದು ದಶಕಕ್ಕೂ ಹೆಚ್ಚು ಕಾಲ ವೈಜ್ಞಾನಿಕ ಸಾಹಿತ್ಯದ ಪರಿಶೀಲನೆ ಒಳಗೊಂಡಿದೆ.

ಜೀವವೈವಿಧ್ಯ ಸಂಶೋಧನೆ, ಪರಿಸರ ಮೇಲ್ವಿಚಾರಣೆ ಮತ್ತು ಸಂರಕ್ಷಣಾ ಯೋಜನೆಗೆ ಈ ಕ್ಯಾಟಲಾಗ್ ಪ್ರಮುಖ ರಾಷ್ಟ್ರೀಯ ಸಂಪನ್ಮೂಲವಾಗಿ ಕಾರ್ಯನಿರ್ವಹಿಸುತ್ತದೆ. ಅಧಿಕೃತ ಧ್ವನಿ, ಸ್ಪಷ್ಟ ಕಾನೂನು ಗುರುತು ಮತ್ತು ವೈಜ್ಞಾನಿಕ ಇತಿಹಾಸದಲ್ಲಿ ಶಾಶ್ವತ ಸ್ಥಾನ ನೀಡುವುದನ್ನು ಖಚಿತಪಡಿಸಲಿದೆ.

**-ಡಾ.ಧೃತಿ ಬ್ಯಾನರ್ಜಿ**
ಝೂಲಾಜಿಕಲ್ ಸರ್ವೆ ಆಫ್ ಇಂಡಿಯಾ ನಿರ್ದೇಶಕಿ

Vijayakarnataka Pg.09

Sanjevani 06.08.2026
Pg.02



ಕೃಷಿ ಇಲಾಖೆಯ ಸಿ ಅಂಡ್ ಆರ್ ರೂಲ್ಸ್‌ನಲ್ಲಿ ಸೇರಿಸಲಾಗಿರುವ ಎಐಸಿಟಿಇ ಮಾನ್ಯತೆಯನ್ನು ರದ್ದುಗೊಳಿಸುವಂತೆ, ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಅಖಿಲ ಕರ್ನಾಟಕ ಕೃಷಿ ಮತ್ತು ಕೃಷಿ ಸಂಬಂಧಿತ ಪದವೀಧರರ ಒಕ್ಕೂಟದ ಪದಾಧಿಕಾರಿಗಳು, ಸದಸ್ಯರು ಇಂದು ನಗರದ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ನಡೆಸಿದರು.

06082026 Bangalore
Aug 06, 2026 | Page 2
Powered by: Karnataka News Publications Private Ltd

Pg.6